# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority
"ನೋಂದಾಯಿತ ಅಂಚೆಸ್ವೀಕೃತಿ ಬಾಕಿ"

ಸಂಖ್ಯೆ: ಬೆಂಅಪ್ರಾ/ನಯೋಸ/PRL-42/2012-13/4339/2015-16
No.

ದಿನಾಂಕ: 04.02.16
Date:

ಇವರಿಗೆ,

ಶ್ರೀ ಮುನಿಯಪ್ಪ ಮತ್ತು ಇತರರು
ಹಾಗೂ ಶ್ರೀ ಬಿ.ರಘುರಾಮಿರೆಡ್ಡಿ ಮತ್ತು
ಶ್ರೀ ಬಿ. ರಾಮಮೋಹನ್ ರೆಡ್ಡಿ ರವರು
(ಜಿ.ಪಿ.ಎ.ದಾರರು)
ನಂ. ಎಲ್.4, ಗ್ರೀನ್ ಕೋರ್ಟ್ ಅಪಾರ್ಟ್ ಮೆಂಟ್,
ಶ್ರೀನಿಧಿ ಬಡಾವಣೆ, 8ನೇ ಮುಖ್ಯರಸ್ತೆ
4ನೇ ಬ್ಲಾಕ್, ವಿದ್ಯಾರಣ್ಯಪುರ,
ಬೆಂಗಳೂರು.

ಮಾನ್ಯರೇ,

ವಿಷಯ: ಬೆಂಗಳೂರು ಉತ್ತರ ತಾಲ್ಲೂಕು, ಹೆಸರಘಟ್ಟ ಹೋಬಳಿ, ಬ್ಯಾಲಕೆರೆ ಗ್ರಾಮದ ಸರ್ವೆನಂ. 34 [P],35/1 [p], 35/2 [P] 39/1 [P], 39/2A ( P), 39/ 2B [P], 39/3,40/1 (P) 40/2 (P) ಮತ್ತು 42 ರಲ್ಲಿನ ಒಟ್ಟು 13 ಎಕರೆ 38 ಗುಂಟೆ ಅಥವಾ 56,453.18 ಚ.ಮೀ. ಪ್ರದೇಶಕ್ಕೆ ವಸತಿ ಬಡಾವಣೆ ನಕ್ಷೆಯನ್ನು ಶ್ರೀ ಮುನಿಯಪ್ಪ ಮತ್ತು ಇತರರು ಹಾಗೂ GPA ದಾರರಾದ ಶ್ರೀ. ಬಿ. ರಘುರಾಮಿರೆಡ್ಡಿ ಮತ್ತು ಬಿ. ರಾಮಮೋಹನರೆಡ್ಡಿ ರವರ ಪರವಾಗಿ ಅನುಮೋದಿಸುವ ಕುರಿತು.

ಉಲ್ಲೇಖ:
1. ತಮ್ಮ ಅರ್ಜಿ ದಿನಾಂಕ 22/01/2014.
2. ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ವಿಷಯ ಸಂಖ್ಯೆ:199/2015, ದಿನಾಂಕ 29/12/2015.

******

ಉಲ್ಲೇಖ (1) ರಲ್ಲಿನ ಮನವಿಯನ್ನು ದಿನಾಂಕ 29/12/2015 ರಂದು ನಡೆದ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಮುಂದೆ ವಿಷಯ ಸಂಖ್ಯೆ:199/2015 ರಡಿ ಮಂಡಿಸಿ, ಚರ್ಚಿಸಿ, ಚರ್ಚೆಯ ನಂತರ RMP-2015 ರಲ್ಲಿ ಸೂಚಿಸಿರುವಂತೆ ಗ್ಯಾಸ್ ಪೈಪ್ ಲೈನ್ ಮತ್ತು 30 ಮೀ. ಅಗಲದ ರಸ್ತೆಯನ್ನು ಸೂಚಿಸಿ ಸರಿಪಡಿಸಿದ ವಸತಿ ಬಡಾವಣೆ ನಕ್ಷೆಯನ್ನು ಅರ್ಜಿದಾರರಿಂದ ಪಡೆದು ಅನುಮೋದಿಸುವ ಅಧಿಕಾರವನ್ನು ಆಯುಕ್ತರಿಗೆ ಪ್ರತ್ಯಾಯೋಜಿಸುವ ಷರತ್ತು ಹಾಗೂ ಇತರೇ ಸಾಮಾನ್ಯ ಷರತ್ತುಗಳನ್ನು ವಿಧಿಸಿ ಬೆಂಗಳೂರು ಉತ್ತರ ತಾಲ್ಲೂಕು, ಹೆಸರಘಟ್ಟ ಹೋಬಳಿ, ಬ್ಯಾಲಕೆರೆ ಗ್ರಾಮದ ಸರ್ವೆನಂ. 34 [P],35/1 [p], 35/2 [P] 39/1 [P], 39/2A ( P), 39/ 2B [P], 39/3,40/1 (P) 40/2 (P) ಮತ್ತು 42 ರಲ್ಲಿನ ಒಟ್ಟು 13 ಎಕರೆ 38 ಗುಂಟೆ ಅಥವಾ 56,453.18 ಚ.ಮೀ. ಪ್ರದೇಶದಲ್ಲಿ ವಸತಿ ಬಡಾವಣೆ ನಕ್ಷೆಯನ್ನು ಅನುಮೋದಿಸಲು ತೀರ್ಮಾನಿಸಲಾಯಿತು.

2..

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು - 560 020.
T. Chowdaiah Road, Kumarapark West, Bangalore-560 020, Facsimile: 2334 5799, Website: www.bdabangalore.org

ಹಾಗಾಗಿ ಈ ಕೆಳಕಂಡ ಶುಲ್ಕಗಳನ್ನು ಈ ಪತ್ರ ತಲುಪಿದ 90 ದಿವಸಗಳೊಳಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆವರಣದಲ್ಲಿರುವ ಕೆನರಾ ಬ್ಯಾಂಕ್ ಶಾಖೆಯಲ್ಲಿ ಹಣ ಪಾವತಿ ಮಾಡಿ ಚಲನ್ ಪ್ರತಿಯನ್ನು ಈ ವಿಭಾಗಕ್ಕೆ ಸಲ್ಲಿಸಲು ತಿಳಿಸಲಾಗಿದೆ.

| ಕ್ರಮ ಸಂಖ್ಯೆ | ಹೆಡ್ ಆಫ್ ಅಕೌಂಟ್ | ವಿವರಗಳು | ಮೊತ್ತ |
|---|---|---|---|
| 1 | 185 | ಉತ್ತಮತೆ ಶುಲ್ಕ ₹ 20/- ರಂತೆ ಪ್ರತಿ ಚ.ಮೀ. ಗೆ 56,453.18 ಚ.ಮೀ. x ₹ 20/- | 11,29,064-00 |
| 2 | 537 | ಕೊಳಚೆ ನಿರ್ಮೂಲನಾ ಅಭಿವೃದ್ಧಿ ಶುಲ್ಕ ಹೆಕ್ಟೇರ್ ಒಂದಕ್ಕೆ ₹ 25,000/- ರಂತೆ 56453.18 ಚ.ಮೀ. x ಪ್ರತಿ ಚ.ಮೀ ಗೆ ₹ 2.50 | 1,41,133-00 |
| 3 | 186 | ಮೇಲ್ವಿಚಾರಣೆ ಶುಲ್ಕ (ಸಿವಿಲ್ ಕಾಮಗಾರಿ ಮೇಲೆ ಶೇ. 4 ರಂತೆ ಪ್ರತಿ ಎಕರೆ ಒಂದಕ್ಕೆ ₹ 65,700/- ರಂತೆ 13.95 ಎಕರೆ x ₹ 65,700/- | 9,16,515-00 |
| 4 | 199 | ಸರ್ಕಾರದ ಅಧಿಸೂಚನೆ ದಿನಾಂಕ 03-01-2012 ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸುತ್ತೋಲೆ ಸಂಖ್ಯೆ ಬೆಂಅಪ್ರಾ/ನಯೋಸ/66/2012-13. ದಿನಾಂಕ 04-05-2012 ರಂತೆ ಕೆರೆ ಅಭಿವೃದ್ಧಿ ಶುಲ್ಕ ಪ್ರತಿ ಎಕರೆಗೆ ₹ 1.00 ಲಕ್ಷದಂತೆ 13.95 ಎಕರೆ x ₹ 1,00,000/- | 13,95,000-00 |
| 5 | 188 | ಪರಿಶೀಲನಾ ಶುಲ್ಕ ಪ್ರತಿ ಚ.ಮೀ. ಗೆ 50 ಪೈಸೆಯಂತೆ 56,453.18 ಚ.ಮೀ x 0.50 | 28,227-00 |
| 6 | 188 | ಪೂರ್ಣಾಂಕಕ್ಕೆ | 1-00 |
| | | ಒಟ್ಟು ₹ | 36,09,940-00 |

[ಮೂವತ್ತಾರು ಲಕ್ಷದ ಒಂಭತ್ತು ಸಾವಿರದ ಒಂಭೈನೂರ ನಲವತ್ತು ₹ ಮಾತ್ರ ]

ಹಾಗೂ ಈ ಕೆಳಗಿನ ಷರತ್ತುಗಳನ್ನು ಪಾಲಿಸಲು ತಿಳಿಸಲಾಗಿದೆ.

1. ಕಾವೇರಿ ನೀರಿನ ಕರ, ವರ್ತುಲ ರಸ್ತೆ, ಮೇಲುಕರ ಮತ್ತು MRTS ಕರಗಳನ್ನು ಸರ್ಕಾರದ ಅಂತಿಮ ತೀರ್ಮಾನಕ್ಕೆ ಬದ್ಧರಾಗಿ ಪಾವತಿಸುವುದಾಗಿ ಒಪ್ಪಿಕೊಂಡು ₹.200/- ಗಳ ಛಾಪಾ ಕಾಗದದಲ್ಲಿ ನೋಟರಿಯವರಿಂದ ದೃಢೀಕರಿಸಿದ ಪ್ರಮಾಣ ಪತ್ರವನ್ನು ಸಲ್ಲಿಸುವುದು.
2. W.P.No.41129/15 ರಲ್ಲಿ ದಿನಾಂಕ 30/10/2015 ರ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಹಿನ್ನಲೆಯಲ್ಲಿ ಮೆಟ್ರೋಸೆಸ್ ಪಾವತಿಸುವ ಸಂಬಂಧ ಸರ್ಕಾರವು ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧರಾಗಿರುವುದಾಗಿ ಒಪ್ಪಿಕೊಂಡು ₹.200/-ಗಳ ಛಾಪಾ ಕಾಗದದಲ್ಲಿ ನೋಟರಿಯವರಿಂದ ದೃಢೀಕರಿಸಿದ ಪ್ರಮಾಣ ಪತ್ರವನ್ನು ಸಲ್ಲಿಸುವುದು.

3. RMP-2015 ರಲ್ಲಿ ಸೂಚಿಸಿರುವಂತೆ ಗ್ಯಾಸ್ ಪೈಪ್ ಲೈನ್ ಮತ್ತು 30.ಮೀ ಅಗಲದ ರಸ್ತೆಯನ್ನು ಸೂಚಿಸಿ ಸರಿಪಡಿಸಿದ/ತಿದ್ದುಪಡಿಗೊಳಿಸಿದ ಕರಡು ವಸತಿ ಬಡಾವಣೆ ನಕ್ಷೆಯನ್ನು ಸಹ ಪ್ರಾಧಿಕಾರಕ್ಕೆ ಶುಲ್ಕವನ್ನು ಪಾವತಿಸುವ ಜೊತೆಯಲ್ಲೇ ಸಲ್ಲಿಸತಕ್ಕದ್ದು.

ಕರಡು ಪತ್ರ ಹೆಚ್ಚುವರಿ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.)

ತಮ್ಮ ವಿಶ್ವಾಸಿ,

24/02/2016

ನಗರ ಯೋಜಕ ಸದಸ್ಯರ ಪರವಾಗಿ

ನಗರ ಯೋಜನಾ ವಿಭಾಗ

ಬೆಂಅಪ್ರಾಬೆಂಗಳೂರು .